**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-188/2022**

ಪಿ.ಡಬ್ಲ್ಯೂಃ- 1
ಸಿ.ಡಬ್ಲ್ಯೂಃ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಂಜುಳಾಬಾಯಿ |
| ಗಂಡನ ಹೆಸರುಃ | : | ಗಂಗಾನಾಯಕ |
| ವಯಸ್ಸುಃ | : | 40 ವರ್ಷ |
| ವೃತ್ತಿಃ | : | ವ್ಯವಸಾಯ |
| ವಾಸಃ | : | ಪುರಲೆಹಳ್ಳಿ, ಬಾಣಾವರ. |

**ದಿನಾಂಕಃ 02-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಶರತ್ ನನ್ನ ಭಾವನ ಮಗ ಅಂದರೆ ನನ್ನ ಗಂಡನ ಅಣ್ಣನ ಮಗ. ಚಾಸಾ-2 ನನ್ನ ಮೈದುನನ ಮಗ. ಚಾಸಾ-4 ನನ್ನ ಮೈದುನ. ಚಾಸಾ-5 ಪಕ್ಕದ ಮನೆಯವರು ಚಾಸಾ-6 ಚಾಸಾ-4 ರವರ ಹೆಂಡತಿ. ಚಾಸಾ-7 ರಿಂದ 10 ರವರು ಪಕ್ಕದ ಮನೆಯವರು. ಆರೋಪಿತರ ಪರಿಚಯ ಇದೆ, ಅವರೆಲ್ಲರೂ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ವಾಸವಾಗಿದ್ದಾರೆ.

2. ಈಗ್ಯೆ ನಾಲ್ಕು ವರ್ಷಗಳ ಹಿಂದೆ ನನ್ನ ಭಾವನ ಮಕ್ಕಳಾದ ಮೃತ ಶರತ್, ಚಾಸಾ-3 ಹಾಗೂ ಚಾಸಾ-14 ರವರು ಬೇರೆ ಗ್ರಾಮಕ್ಕೆ ಸಮಾರಂಭಕ್ಕೆ ಹೋಗಿದ್ದರು. ಆರೋಪಿ-1 ರಿಂದ 3 ರವರು ಚಾಸಾ-14 ರವರ ಸ್ನೇಹಿತರಿದ್ದು ನಮ್ಮನ್ನು ಕರೆಯದೆ

ನೀನು ಮಾತ್ರ ಸಮಾರಂಭಕ್ಕೆ ಹೋಗಿದ್ದೀಯಾ ಎಂದು ಮೃತ ಶರತ್ ಬಳಿ ಕೇಳಿ ಕೆಟ್ಟ ಕೆಟ್ಟ ಪದಗಳಿಂದ ಅಂದರೆ ಅವಾಚ್ಯ ಶಬ್ದಗಳಿಂದ ಬೈಯಲು ಪ್ರಾರಂಭಿಸಿದರು. ಗಲಾಟೆಯ ಶಬ್ದ ಕೇಳಿ ಮನೆಯಲ್ಲಿದ್ದ ನಾನು ಹೊರಗೆ ಬಂದೆನು. ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಎಲ್ಲಾ ಆರೋಪಿತರು ಮೃತನೊಂದಿಗೆ ಗಲಾಟೆ ಮಾಡುತ್ತಿದ್ದು, ಆರೋಪಿ-1 ರಿಂದ 3 ರವರು ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡಿದ್ದರು. ಆ ಸಮಯದಲ್ಲಿ ಆರೋಪಿ-1 ರಿಂದ 3 ರವರು ಮತ್ತೆ ಮೃತನಿಗೆ ನಮ್ಮನ್ನು ಯಾಕೆ ಸಮಾರಂಬಚಿಕ್ಕೆ ಕರೆದುಕೊಂಡು ಹೋಗಲಿಲ್ಲ ಎಂದು ಪ್ರಶ್ನಿಸಿದ್ದು, ಅದಕ್ಕೆ ಮೃತನು ನಾವು ಬೇರೆ ಸಮಾರಂಭಕ್ಕೆ ಹೋಗಿದ್ದು ನಾವು ಯಾವುದೇ ಸಮಾರಂಭ ಮಾಡಿರುವುದಿಲ್ಲ ಎಂದು ಹೇಳಿದ್ದು, ಅದಕ್ಕೆ ಆರೋಪಿತರು ಮೃತನಿಗೆ ಅವಾಚ್ಯ ಶಬ್ದಗಳಿಂದ ಬೈದರು. ಆಗ 3ನೇ ಆರೋಪಿ ದೊಣ್ಣೆಯಿಂದ ಮೃತನ ತಲೆಗೆ, 1ನೇ ಆರೋಪಿ ದೊಣ್ಣೆಯಿಂದ ಮೃತನ ಮೈಕೈಗೆ ಹಲ್ಲೆ ಮಾಡಿದ್ದು, ಆ ಸಮಯದಲ್ಲಿ ಆರೋಪಿ-2, 4 ಮತ್ತು 5 ರವರು ಕೈಗಳಿಂದ ಮೃತನಿಗೆ ಹಲ್ಲೆ ಮಾಡಿದರು. ನಾನು ಬಿಡಿಸಲು ಹೋದಾಗ 3ನೇ ಆರೋಪಿ ದೊಣ್ಣೆಯಿಂದ ನನ್ನ ಎಡಕಾಲಿಗೆ ಹೊಡೆದನು. ಆ ಸಮಯದಲ್ಲಿ ಬಿಡಿಸಲು ಬಂದ ಚಾಸಾ-2 ಪವಿತ್ರಬಾಯಿ ರವರಿಗೆ ಆರೋಪಿ-4 ಮತ್ತು 5ರವರು ಕೈಗಳಿಂದ ಆಕೆಗೆ ಹಲ್ಲೆ ಮಾಡಿದರು ಮತ್ತು ನನಗೂ ಸಹ ಹಲ್ಲೆ ಮಾಡಿದರು. ಆ ಸಮಯದಲ್ಲಿ ಚಾಸಾ-4 ರಿಂದ 7 ರವರು ಬಂದು ಜಗಳ ಬಿಡಿಸಿದರು. ಆರೋಪಿತರು ಮೃತನಿಗೆ ಹಲ್ಲೆ ಮಾಡಿದ ಕಾರಣ ಆತನು ಅಲ್ಲೇ ಕುಸಿದು ಬಿದ್ದನು. ನಂತರ ನಾವುಗಳು ಮೃತನನ್ನು ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆವು. ಅಲ್ಲಿನ ವೈದ್ಯಾಧಿಕಾರಿಗಳು ಮೃತನಿಗೆ ಚಿಕಿತ್ಸೆ ನೀಡಿ ಇಲ್ಲಿ ಆಗುವುದಿಲ್ಲ, ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು

ಕಳುಹಿಸಿಕೊಟ್ಟರು. ನಾನು ಮತ್ತು ಚಾಸಾ-2 ರವರು ಅರಸೀಕೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡೆವು.

3. ಪೊಲೀಸರು ಆಸ್ಪತ್ರೆಯಲ್ಲಿ ನನ್ನ ದೂರನ್ನು ಪಡೆದರು. ಸಾಕ್ಷಿಯು ದೂರನ್ನು ಹಾಗೂ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1ಕ್ಕೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ)ಗೆ ಗುರುತಿಸಲಾಯಿತು.

4. ಮೃತ ಶರತ್ ನನ್ನು ಹಾಸನದ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ನಿಮಾನ್ಸ್ ಆಸ್ಪತ್ರೆಯಿಂದ ಕಣ್ವ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಮೃತ ಶರತ್ ನನ್ನು ಸೇರಿಸಲಾಯಿತು. ಕಣ್ವ ಆಸ್ಪತ್ರೆಯ ವೈದ್ಯಾಧಿಕಾರಿಗಳು ಮೃತನ ತಲೆಗೆ ಬಲವಾದ ಪೆಟ್ಟು ಬಿದ್ದಿದೆ ಇಲ್ಲಿಯೂ ಆಗುವುದಿಲ್ಲ ಎಂದು ಹೇಳಿ ವಾಪಸ್ ಕಳುಹಿಸಿಕೊಟ್ಟಿದ್ದು, ಆತನನ್ನು ವಾಪಸ್ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಬರುವಾಗ ನೆಲಮಂಗಲದ ಟೋಲ್ ಬಳಿ ಸತ್ತು ಹೋಗಿರುತ್ತಾನೆ. ನಂತರ ಶರತ್ ಮೃತಪಟ್ಟ ಕಾರಣ ಮತ್ತೆ ಬಾಣವಾರ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ 2ನೇ ದೂರನ್ನು ಹಾಗೂ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 2ನೇ ದೂರನ್ನು ನಿಪಿ-2ಕ್ಕೆ, ಸಾಕ್ಷಿಯ ಸಹಿಯನ್ನು ನಿಪಿ-2(ಎ)ಗೆ ಗುರುತಿಸಲಾಯಿತು.

5. ಶರತ್ ಮೃತಪಟ್ಟ ಮರುದಿನ ಪೊಲೀಸರು ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟಿದ್ದು, ಸದರಿ ಕೃತ್ಯ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ರಕ್ತಮಿಶ್ರಿತ ಮಣ್ಣನ್ನು ಹಾಗೂ ಸಾದಾ ಮಣ್ಣನ್ನು ತೆಗೆದುಕೊಂಡು ಪ್ರತ್ಯೇಕ ಡಬ್ಬಿಗಳಲ್ಲಿ ಹಾಕಿದರು. ನಂತರ ಸ್ಥಳದಲ್ಲೇ ಪಂಚನಾಮೆಗೆ ನನ್ನ ಸಹಿ ಪಡೆದು ಫೋಟೋ ತೆಗೆದರು. ಸಾಕ್ಷಿ ಸ್ಥಳ ಪಂಚನಾಮೆ ಹಾಗೂ ಅದರ

ಮೇಲಿರುವ ತನ್ನ ಸಹಿಯನ್ನು ಹಾಗೂ ಫೋಟೋವನ್ನು ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ–3ಕ್ಕೆ ಸಾಕ್ಷಿಯ ಸಹಿಯನ್ನು ನಿಪಿ–3(ಎ)ಗೆ ಹಾಗೂ ಫೋಟೋವನ್ನು ನಿಪಿ–4ಕ್ಕೆ ಗುರುತಿಸಲಾಯಿತು. ನಿಪಿ–4 ರಲ್ಲಿ ತನ್ನ ಹಾಗೂ ಚಾಸಾ–11 ಮತ್ತು 12 ರವರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ–3ಕ್ಕೆ ಚಾಸಾ–11 ಮತ್ತು 12 ರವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಯು ಮೃತ ಶರತ್ ನ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–5 ರಿಂದ 8 ಎಂದು ಗುರುತಿಸಲಾಯಿತು. ಸಾಕ್ಷಿಯು ದೊಣ್ಣೆಗಳನ್ನು ನೋಡಿದರೆ ಗುರುತಿಸುವುದಾಗಿ ಹೇಳಿದ್ದು ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲು ಮಾಡಿರುವ ಮೂರು ಪ್ಯಾಕ್ ಗಳನ್ನು ತೆರೆಸಿ ಅವುಗಳಲ್ಲಿರುವ ದೊಣ್ಣೆಗಳನ್ನು ತೋರಿಸಲಾಗಿ ಸದರಿ ದೊಣ್ಣೆಗಳಿಂದಲೇ ಆರೋಪಿಗಳು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿ ಗುರುತಿಸಿದ ಮೇರೆಗೆ ಸದರಿ ಮೂರು ದೊಣ್ಣೆಗಳನ್ನು ಮುಮಾ–1 ರಿಂದ 3ಕ್ಕೆ ಗುರುತಿಸಲಾಯಿತು. ಸಾಕ್ಷಿಗೆ ಮತ್ತೆರಡು ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲು ಮಾಡಿರುವ ಪ್ಯಾಕ್ ಗಳನ್ನು ತೆರೆಸಿ ಪ್ರತ್ಯೇಕ ಪ್ಲಾಸ್ಟಿಕ್ ಡಬ್ಬಿಯಲ್ಲಿರುವ ರಕ್ತ ಮಿಶ್ರಿತ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುಮಾ–4ಕ್ಕೆ ಹಾಗೂ ಸಾದಾ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಮುಮಾ–5ಕ್ಕೆ ಗುರುತಿಸಲಾಯಿತು. ಪೊಲೀಸರು ಪಂಚನಾಮೆ ಮಾಡಲು ದಿನಾಂಕಃ 17 ರಂದು ಬೆಳಿಗ್ಗೆ 10 ಗಂಟೆಗೆ ಬಂದಿದ್ದರು. ಸಮಾರಂಭಕ್ಕೆ ಊಟಕ್ಕಾಗಿ ಕರೆದುಕೊಂಡು ಹೋಗಲಿಲ್ಲ ಎಂಬ ಕಾರಣದಿಂದ ಶರತ್ ಗೆ ಅವಾಚ್ಯ ಶಬ್ದಗಳಿಂದ ಬೈದು ಆರೋಪಿತರು ಹಲ್ಲೆ ಮಾಡಿದ ಕಾರಣ ಸದರಿ ಶರತ್ ಮೃತಪಟ್ಟಿರುತ್ತಾನೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

6. ಶರತ್ ನನ್ನು ಮುಗಿಸಿಬಿಡಬೇಕು ಎಂಬ ಉದ್ದೇಶದಿಂದ ಜಗಳ ತೆಗೆದು ಶರತ್ ನನ್ನು ಜೀವಸಹಿತ ಬಿಡಬೇಡಿ, ಈತನನ್ನು ಮುಗಿಸಬೇಕು ಎಂದು ಕೊಲೆ ಮಾಡುವ ಉದ್ದೇಶಂದ ಆರೋಪಿ-1 ಮತ್ತು 3 ರವರು ದೊಣ್ಣೆಯಿಂದ ತಲೆಗೆ, ಮೈಕೈಗೆ ಹಲ್ಲೆ ಮಾಡಿದ್ದು ಹಾಗೂ ಇತರೆ ಆರೋಪಿತರು ದೊಣ್ಣೆಯಿಂದ ಹಾಗೂ ಕೈಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾರೆಂದು ಸೂಚಿಸುವುದು ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಎ ಎಂ ವಕೀಲರಿಂದಃ**

ಶ್ರೀ ಎಂ ಎ ಎಂ ವಕೀಲರು ಕಲಂ. 232(2) ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿದ ಕಾರಣ ಪಾಟಿ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.